KARN210010062023

**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ</u>**

**<u>:ಉಪಸ್ಥಿತರುಃ</u>**

**ಶ್ರೀ.ವೆಂಕಟೇಶಪ್ಪ ವಿ.,** ಬಿ.ಎ. ಎಲ್.ಎಲ್.ಬಿ.
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ

**<u>ದಿನಾಂಕ 13 ನೇ ಮಾರ್ಚ್ - 2026 ನೇ ಇಸವಿ</u>**

**<u>ಸಿ.ಸಿ.ಸಂಖ್ಯೆಃ 388/2023</u>**

**<u>ಪಿರ್ಯಾದುದಾರರುಃ</u>**

ಸರ್ಕಾರದ ಪರವಾಗಿಃ
ಅಕ್ಕೂರು ಪೊಲೀಸ್ ಠಾಣೆ
ಅಕ್ಕೂರು, ಚನ್ನಪಟ್ಟಣ

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

**<u>ಆರೋಪಿತರು :</u>**

1. ಶ್ರೀನಿವಾಸ ಬಿನ್ ಸುಭಾಷ್
ವಯಸ್ಸು 30 ವರ್ಷ,

2. ಮುದ್ದು ಬಿನ್ ಮಹದೇವ,
ವಯಸ್ಸು 26 ವರ್ಷ,

3. ನವೀನ ಬಿನ್ ಪುಟ್ಟಸ್ವಾಮಿ,
ವಯಸ್ಸು 27 ವರ್ಷ, **(ಮೃತರು)**

4. ಯಲ್ಲೇಗೌಡ ಬಿನ್ ಮಹದೇವ,
ವಯಸ್ಸು 25 ವರ್ಷ,

ಎಲ್ಲರ ವಾಸಃ ಅಂಬಾಡಹಳ್ಳಿ ಗ್ರಾಮ,
ವಿರೂಪಾಕ್ಷಿಪುರ ಹೊಬೀಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

**(1, 2 ಮತ್ತು 4ನೇ ಆರೋಪಿತರ ಪರ ಪ್ರತಿನಿಧಿಸುವವರು ಶ್ರೀ. ಹೆಚ್.ಡಿ.ಎಸ್, ವಕೀಲರು)**

| | |
|---|---|
| ತಕ್ಷೀರು ನಡೆದ ದಿನಾಂಕ | 21.02.2023 |
| ತಕ್ಷೀರು ವರದಿ ಮಾಡಿದ ದಿನಾಂಕ | 22.02.2023 |
| ಫಿರ್ಯಾದುದಾರರ ಹೆಸರು | ಶ್ರೀ.ಗುರುಸ್ವಾಮಿ |
| ಸಾಕ್ಷಿದಾರರ ಹೇಳಿಕೆಯ ದಿನಾಂಕ | 12.02.2026 |
| ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | 20.02.2026 |
| ಅಪಾದಿಸಲಾದ ಅಪಾದನೆಗಳು | ಭಾರತೀಯ ದಂಡ ಸಂಹಿತೆ ಕಲಂ.504, 324, 506 ಸಹವಾಚಕ 34. |
| ನ್ಯಾಯಾಲಯದ ತೀರ್ಮಾನ | ನಿರ್ದೋಷಿತರು |

**(ವೆಂಕಟೇಶಪ್ಪ.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ**

## :: ತೀರ್ಪು::

ಅಕ್ಕೂರು ಪೊಲೀಸ್ ಠಾಣೆಯ ಠಾಣಾಧಿಕಾರಿರವರು 1 ರಿಂದ 4 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 324, 506

ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂದು ಆಪಾದಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರ:**

ದಿನಾಂಕಃ 21.02.2023 ರಂದು ರಾತ್ರಿ 08.00 ಗಂಟೆ ಸಮಯದಲ್ಲಿ ಅಕ್ಕೂರು ಪೋಲೀಸ್ ಠಾಣಾ ಸರಹದ್ದು ಅಂಬಾಡಹಳ್ಳಿ ಗ್ರಾಮದಲ್ಲಿ 4ನೇ ಆರೋಪಿತರ ಮನೆಯ ಮುಂದಿನ ರಸ್ತೆಯಲ್ಲಿ ಚಾಸಾ-1 ಮತ್ತು ಚಾಸಾ-2 ರವರು ಹೋಗುತ್ತಿದ್ದಾಗ ಅದೇ ರಸ್ತೆಯಲ್ಲಿ ಎದುರುಗಡೆಯಿಂದ ಬಂದ 1 ರಿಂದ 4ನೇ ಆರೋಪಿತರು ಏಕಾಏಕಿ ಜಗಳ ತೆಗೆದು ಚಾಸಾ-1 ಮತ್ತು ಚಾಸಾ-2 ರವರನ್ನು ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ, ಚಾಸಾ-1 ರವರಿಗೆ ದೊಣ್ಣೆಯಿಂದ ಹಾಗೂ ಚಾಸಾ-2 ರವರಿಗೆ ಕುಡುಗೋಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿರುತ್ತಾರೆ ಹಾಗೂ ಚಾಸಾ-1 ಮತ್ತು ಚಾಸಾ-2 ರವರನ್ನು ಕುರಿತು ನಮ್ಮಗಳ ವಿಚಾರಕ್ಕೆ ಬಂದರೆ ನಿಮಗೆ ಒಂದು ಗತಿ ಕಾಣಿಸುತ್ತೇವೆ ಎಂದು ಪ್ರಾಣ ಬೆದರಿಕೆಯನ್ನು ಹಾಕಿರುವುದು ಎಂದು ತನಿಖೆಯಿಂದ ದೃಢಪಟ್ಟಿರುತ್ತದೆ ಎಂಬುದು ಅಭಿಯೋಜನೆಯ ಪ್ರಕರಣದ ಸಾರಾಂಶವಾಗಿರುತ್ತದೆ.

3. ಆರೋಪಿತರು ವಕೀಲರ ಮುಖಾಂತರ ಹಾಜರಾಗಿ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಪ್ರಕಾರ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ

ಪ್ರತಿಯನ್ನು ನ್ಯಾಯಾಲಯವು ಪೂರೈಸಿದ್ದು, ಆರೋಪಿತರ ವಿರುದ್ಧ ಈ ನ್ಯಾಯಾಲಯವು ಮಾಡಲಾದ ದೋಷಾರೋಪಣೆಯು ತಾವು ಯಾವುದೇ ತಪ್ಪನ್ನು ಮಾಡಿಲ್ಲವೆಂದು ಮತ್ತು ಸದರಿ ಮೊಕದ್ದಮೆಯು ವಿಚಾರಣೆಯಾಗಬೇಕೆಂದು ತಿಳಿಸಿದ್ದರಿಂದ ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯು ನಡೆಸಲ್ಪಟ್ಟಿರುತ್ತದೆ.

4. ಅಭಿಯೋಜನೆಯ ಪರ ಹಾಜರುಪಡಿಸಿದ 09 ಜನ ಸಾಕ್ಷಿದಾರರ ಪೈಕಿ ಸಾಕ್ಷ್ಯ ವಿಚಾರಣೆಯಲ್ಲಿ ಪ್ರಾಸಾ.1 ಮತ್ತು ಪ್ರಾಸಾ.2 ರವರು ವಿಚಾರಣೆಗೆ ಒಳಪಟ್ಟಿರುತ್ತಾರೆ. ಅಭಿಯೋಜನೆಯ ಪರ ನಿಶಾನೆ.ಪಿ.1 ಮತ್ತು 2 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿ ಮೊಕದ್ದಮೆಯಲ್ಲಿ ಪ್ರಾಸಾ.1 ಮತ್ತು ಪ್ರಾಸಾ.2 ರವರು ರವರ ಸಾಕ್ಷ್ಯಗಳು ಪ್ರತಿಕೂಲ ಸಾಕ್ಷ್ಯಗಳೆಂದು ಪರಿಗಣಿಸಲ್ಪಟ್ಟಿರುವುದರಿಂದ ಆರೋಪಿತರ ವಿರುದ್ಧ ಆರೋಪಿಸಲ್ಪಟ್ಟಿರುವ ಅಪಾದನೆಗಳನ್ನು ಸಾಬೀತು ಪಡಿಸುವ ಯಾವುದೇ ಸಾಕ್ಷ್ಯವು ಇಲ್ಲದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಕೆಳಗಿನ ಪ್ರಕ್ರಿಯೆಗಳನ್ನು ಮನ್ನಾ ಮಾಡಲಾಗಿರುತ್ತದೆ.

5. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

6. ಇಬ್ಬರ ಪರ ವಾದವನ್ನು ಕೇಳಿರುತ್ತೇನೆ. ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ.

7. ಈ ಪ್ರಕರಣವನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

**:: ಅಂಶಗಳು::**

**1.** ದಿನಾಂಕಃ **21.02.2023** ರಂದು ರಾತ್ರಿ **08.00** ಗಂಟೆ ಸಮಯದಲ್ಲಿ ಅಕ್ಕೂರು ಪೋಲೀಸ್ ಠಾಣಾ ಸರಹದ್ದು ಅಂಬಾಡಹಳ್ಳಿ ಗ್ರಾಮದಲ್ಲಿ **4** ನೇ ಆರೋಪಿತರ ಮನೆಯ ಮುಂದಿನ ರಸ್ತೆಯಲ್ಲಿ ಚಾಸಾ-**1** ಮತ್ತು ಚಾಸಾ-**2** ರವರು ಹೋಗುತ್ತಿದ್ದಾಗ ಅದೇ ರಸ್ತೆಯಲ್ಲಿ ಎದುರುಗಡೆಯಿಂದ ಬಂದ **1** ರಿಂದ **4** ನೇ ಆರೋಪಿರವರುಗಳು ಏಕಾಏಕಿ ಜಗಳ ತೆಗೆದು ಚಾಸಾ-**1** ಮತ್ತು ಚಾಸಾ-**2** ರವರನ್ನು ಅವ್ಯಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.**504** ಸಹವಾಚಕ ಕಲಂ.**34** ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ**?**

**2.** ಅದೇ ದಿನ**,** ಸ್ಥಳ ಮತ್ತು ಸಮಯದಲ್ಲಿ**,** ಆರೋಪಿತರು ಸಮಾನ ಉದ್ದೇಶದಿಂದ**, 1** ರಿಂದ **4** ನೇ ಆರೋಪಿರವರು ಚಾಸಾ-**1** ರವರಿಗೆ ದೊಣ್ಣೆಯಿಂದ ಹಾಗೂ ಚಾಸಾ-**2** ರವರಿಗೆ ಕುಡುಗೋಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.**324** ಸಹವಾಚಕ **34** ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ**?**

**3.** ಅದೇ ದಿನ**,** ಸ್ಥಳ ಮತ್ತು ಸಮಯದಲ್ಲಿ**,** ಆರೋಪಿತರು ಸಮಾನ ಉದ್ದೇಶದಿಂದ**, 1** ರಿಂದ **4** ನೇ ಆರೋಪಿತರು ಚಾಸಾ-**1** ಮತ್ತು ಚಾಸಾ-**2** ಕುರಿತು ನಮ್ಮಗಳ ವಿಚಾರಕ್ಕೆ

**ಬಂದರೆ ನಿಮಗೆ ಒಂದು ಗತಿ ಕಾಣೆಸುತ್ತೇವೆ ಎಂದು ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ. ಆದಕಾರಣ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ಪ್ರಕಾರ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತು ಪಡಿಸುತ್ತದೆಯೇ?**

**4. ಮಾಡುವ ಆದೇಶ ಏನು ?**

8. ಈ ನ್ಯಾಯಾಲಯವು ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶ ಸಂಖ್ಯೆ 1 : ನಕರಾತ್ಮಕವಾಗಿ**

**ಅಂಶ ಸಂಖ್ಯೆ 2 : ನಕರಾತ್ಮಕವಾಗಿ**

**ಅಂಶ ಸಂಖ್ಯೆ 3 : ನಕರಾತ್ಮಕವಾಗಿ**

**ಅಂಶ ಸಂಖ್ಯೆ 4 : ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಗಾಗಿ**

**ಕಾರಣಗಳು**

9. **ಅಂಶ ಸಂಖ್ಯೆ 1 ರಿಂದ 3** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಇವುಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆ.

10. ಈ ಪ್ರಕರಣದಲ್ಲಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 324, 506 ಸಹವಾಚಕ 34 ರ ಕೆಳಗೆ ಅಪರಾಧವೆಸಗಿರುವ ಕುರಿತು ಆರೋಪ ಹೊರಿಸಿದ್ದು, ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ತಮ್ಮ ಪರ ಸಾಕ್ಷ್ಯ ವಿಚಾರಣೆಗಾಗಿ ಇಬ್ಬರು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ.

11. ಚಾಸಾ.1/ಪ್ರಾಸಾ.1 ಗುರುಸ್ವಾಮಿ ರವರು ಈ ಪ್ರಕರಣದಲ್ಲಿ ದೂರುದಾರರು ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಗೊತ್ತಿಲ್ಲ. ಆರೋಪಿತರಿಗೂ ಮತ್ತು ನನಗೂ ಬಾಯಿಮಾತಿನ ಜಗಳ ಆಗಿರುತ್ತದೆ. ಆರೋಪಿತರು ನನಗೆ ಅವಾಚ್ಯ ಶಬ್ದದಿಂದ ನಿಂದಿಸಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಈ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುವುದಾಗಿ, ಆ ಸಮಯದಲ್ಲಿ ನಿಶಾನೆ ಪಿ **1** ರ ಬರವಣಿಗೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು, ಸ್ವತಃ ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಚಾಸಾ.**2**/ಪ್ರಾಸಾ.**2** ಚಂದ್ರು ರವರು ಈ ಪ್ರಕರಣದಲ್ಲಿ ಗಾಯಾಳು ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ನನಗೆ ಮತ್ತು ಚಾಸಾ**1** ರವರಿಗೆ ಅವಾಚ್ಯ ಶಬ್ದದಿಂದ ನಿಂದಿಸಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಆರೋಪಿತರು ನಮ್ಮ ಊರಿನವರಾಗಿರುತ್ತಾರೆ ಎಂದು ಪ್ರತಿಕೂಲ ಸಾಕ್ಷ್ಯ ನುಡಿದು, ಸ್ವತಃ ಆರೋಪಿತರು ತನ್ನ ಸಂಬಂಧಿಕರಾಗಿರುವುದರಿಂದ ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಪ್ರಾ.ಸಾ.**1** ಮತ್ತು ಪ್ರಾಸಾ.**2** ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಗಳನ್ನು ಗಮನಿಸಿದಾಗ ಪ್ರಾಸಾ.**1** ಮತ್ತು ಪ್ರಾಸಾ.**2** ರವರು ರವರ ಸಾಕ್ಷ್ಯವು ದೂರಿನಲ್ಲಿರುವ ಎಲ್ಲಾ ವಿಷಯಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿರುವುದು ಕಂಡು ಬರುತ್ತದೆ. ಸರ್ಕಾರಿ ಅಭಿಯೋಜಕರು ಈ

ಮೂಲಕ ಪ್ರತಿಕೂಲ ಸಾಕ್ಷ್ಯವಾಗಿ ಪರಿಗಣಿಸಲಾದ ಪ್ರಾಸಾ.1 ಮತ್ತು ಪ್ರಾಸಾ.2 ರವರು ರವರನ್ನು ಪಾಟೀ ಸವಾಲಿಗೆ ಗುರಿಪಡಿಸಿದ್ದರೂ ಸಹ ಪ್ರಾಸಾ.1 ಮತ್ತು ಪ್ರಾಸಾ.2 ರವರು ರವರು ಆರೋಪಿತರ ವಿರುದ್ಧ ಇರುವ ಎಲ್ಲಾ ಆರೋಪಗಳನ್ನು ಸಾರಾಸಗಟಾಗಿ ನಿರಾಕರಿಸಿರುತ್ತಾರೆ. ಈ ಮೂಲಕ ಅಭಿಯೋಜನೆಯವರು ಪ್ರಾಸಾ.1 ಮತ್ತು ಪ್ರಾಸಾ.2 ರವರು ರವರ ಪಾಟೀ ಸವಾಲಿನ ಮುಖಾಂತರವೂ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ತಮ್ಮ ಪರ ಪಡೆಯುವಲ್ಲಿ ವಿಫಲರಾಗಿರುತ್ತಾರೆ. ಪ್ರಾಸಾ-1 ಮತ್ತು ಪ್ರಾಸಾ.2 ರವರ ಸಾಕ್ಷ್ಯದ ಮುಖಾಂತರ ಆರೋಪಿತರ ವಿರುದ್ಧ ಇರುವ ಯಾವುದೇ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ಅಭಿಯೋಜನೆಯವರು ಸ್ಪಷ್ಟ ವೈಫಲ್ಯ ಹೊಂದಿರುವ ಹಿನ್ನಲೆಯಲ್ಲಿ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡುವ ಪ್ರಕ್ರಿಯೆಗಳನ್ನು ಕೈ ಬಿಡಲಾಗಿರುತ್ತದೆ. ಆದ್ದರಿಂದ ಅಭಿಯೋಜನೆಯವರು ಆರೋಪಿತರ ಮೇಲೆ ಆಪಾದಿಸಿದಂತೆ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಈ ಮೂಲಕ ಸಂಶಯದ ಲಾಭವನ್ನು ಪಡೆಯಲು ಆರೋಪಿತರು ಅರ್ಹರಾಗಿದ್ದಾರೆಂದು ನ್ಯಾಯಾಲಯವು ಪರಿಗಣಿಸುತ್ತಾ **1 ರಿಂದ 3 ನೇ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.**

12. **ಅಂಶ ಸಂಖ್ಯೆ 4:** ಈ ಮೇಲ್ಕಂಡ 1 ರಿಂದ 3 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## **:: ಆದೇಶ::**

**1, 2 ಮತ್ತು 4 ನೇ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ.504, 324, 506 ಸಹವಾಚಕ 34 ರಡಿಯಲ್ಲಿನ ದೋಷಾರೋಪಣೆಗಳಿಂದ ನಿರ್ದೋಷಿಗಳು ಎಂದು ತೀರ್ಮಾನಿಸಿ, ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ. (3 ನೇ ಆರೋಪಿಯು ಮೃತರಾಗಿದ್ದು, ಅವರ ವಿರುದ್ಧದ ಪ್ರಕರಣ ಅಬೇಟ್ ಆಗಿರುತ್ತದೆ)**

**ಆರೋಪಿತರ ಮತ್ತು ಜಾಮೀನುದಾರರು ಈಗಾಗಲೇ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.**

**ಮಾಲುಪಟ್ಟಿ ನಂ.13/2023 ಮತ್ತು ಪಿ.ಆರ್ ನಂ.31/2026 ರಲ್ಲಿನ ಸುಮಾರು 2 ಅಡಿ ಉದ್ದದ ಹಿಡಿಗಾತ್ರದ ಕಾಡು ಜಾತಿಯ ಜಾತಿಯ ದೊಣ್ಣೆ ಮೌಲ್ಯರಹಿತವಾಗಿರುವುದರಿಂದ, ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.**

**ಮಾಲು ಪಟ್ಟಿ ಸಂ.13/2023 ಮತ್ತು ಪಿ.ಆರ್.ಸಂ. 31//2026 ರಲ್ಲಿನ ಸುಮಾರು 1 1/4 ಅಡಿ ಉದ್ದದ ಮರದ ಹಿಡಿಕೆಯಿರುವ ಒಂದು ಕಬ್ಬಿಣದ ಕುಡುಗೋಲನ್ನು ಮೇಲ್ಮನವಿ ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.**

(ಶ್ರೀಘ್ರಲಿಪಿಗಾರರು ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2026 ನೇ ಇಸವಿ ಮಾರ್ಚ್ 13 ನೇ** ದಿನಾಂಕದಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

VENKATESHAPPA V
Digitally signed by VENKATESHAPPA V
Date: 2026.03.17 20:15:11 +0530

**(ವೆಂಕಟೇಶಪ್ಪ.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ**

**: ಅನುಬಂಧ ::**

**ಅಭಿಯೋಜನೆಯ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿಃ**

| | | |
|---|---|---|
| ಪ್ರಾಸಾ.1 | : | ಶ್ರೀ ಗುರುಸ್ವಾಮಿ |
| ಪ್ರಾಸಾ.2 | : | ಶ್ರೀ ಚಂದ್ರು |

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಶಾನೆ ಪಿ 1 | : | ದೂರು |
| ನಿಶಾನೆ ಪಿ 1(ಎ) | : | ಪ್ರಾಸಾ.1 ರವರ ಸಹಿ |
| ನಿಶಾನೆ ಪಿ 2 | : | ಪ್ರಾಸಾ.2 ರವರ ಹೇಳಿಕೆ |

**ಆರೋಪಿಗಳ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿಃ**

-ಇಲ್ಲ-

**ಆರೋಪಿಗಳ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿಃ**

-ಇಲ್ಲ-

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳುಃ**

-ಇಲ್ಲ-

**(ವೆಂಕಟೇಶಪ್ಪ.ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಪಟ್ಟಣ**